Strength of Primary Schools and Students in Dharwad District.

487 SRI BHAVU RAO DESHPANDE (Dharwad).—Will the Minister of State for Primary and Secondary Education be pleased to state :—

(a) the No. of primary schools in Dharwad District;

(b) the No. of students in these primary schools;

(c) the No. of teachers teaching in these schools;

(d) whether the No. of teachers is proportionate to the No. of students ?

SMT. NAGAMMA C. KESHAVA MURTHY (Minister of State for Primary and Secondary Education).—

(a) 1,962.

(b) 3,82,357.

(c) 8,443.

(d) No.

REPRESENTATIONS BY MEMBERS

re : *Assault on an M.L.A. at Rajajinagar Police Station.*

ಶ್ರೀ ಎಸ್. ಎಂ. ವೀರನಾಳ ಚಿಂದ್ರಶೇಖರ್.—ಅಧ್ಯಕ್ಷರೆ,ನೆನ್ನೆಯ ದಿವಸ ರಾತ್ರಿ ರಾಜಾಜಿನಗರ ವಿಧಿಯಾದಲ್ಲಿ ನಮ್ಮ ಪಕ್ಷಾನ ಸದಸ್ಯರಲ್ಲಿ ಒಬ್ಬರನ್ನು ಪೋಲೀಸಿನವರು ಮಾನಸಿಗೆ ಬಂದ ಹಾಗೆ ಹೊಡೆದಿದ್ದಾರೆ. ಈಗ ಅವರು ಆಸ್ಪತ್ರೆಯಲ್ಲಿದ್ದಾರೆಂದು ಕೇಳಿಬಂತು. ಇದು ಬಹಳ ದುಃಖಕರವಾದ ವಿಷಯ. ಇವರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆ ಎಂದು ತಿಳಿದುಕೊಳ್ಳಬೇಕಾಗಿದೆ.

ಶ್ರೀ ಜಿ. ಬಸವಣ್ಣಪ್ಪ.—ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವೆಂಕಟೇಶಪ್ಪನವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಧಾರುಣ ಸ್ಥಿತಿಯಲ್ಲಿದ್ದಾರೆ. ರಾಜಾಜಿನಗರದ ವಿಧಿಯಾನಲ್ಲಿ ಪೋಲೀಸರು ಅವರಿಗೆ ಅಮಾನುಷವಾಗಿ ಮಾರ್ ಹ್ಯಾಂಬರ್ ಮಾಡಿದ್ದಾರೆ ಮಾನ್ಯ ಸದಸ್ಯರು ಇರತಕ್ಕ ಪರಿಸ್ಥಿತಿಯನ್ನು ಯಾರು ನೋಡಿದರೂ ಕಣ್ಣೀರು ಬರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಭೇಟಿ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಪ್ರತಿನಿತ್ಯ ಈ ರೀತಿ ನಡೆಯುವುದು ಕಂಡುಬರುತ್ತಿದೆ. ಇದು ಒಳ್ಳೆಯ ದಲ್ಲ. ಇವ್ಯಾವತ್ತು ಶಾಶ್ವತವಾಗಿ ಮೇಲೆ ಕೈ ಮಾಡಿದವರು. ನಾಳೆ ಮಂತ್ರಿಗಳ ಮೇಲೆ ಕೈ ಮಾಡುವುದಕ್ಕೆ ಹಿಂದೆ ಬೀಳುವುದಿಲ್ಲ. ಇದು ಯಾರಿಗೂ ಒಳ್ಳೆಯ ಹೆಸರನ್ನು ತರುವುದಿಲ್ಲ. ಈ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ. ಪಕ್ಷಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ. ಇದು ಬಹಳ ಗಂಭೀರವಾದ ಪ್ರಶ್ನೆ. ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಮಾನ್ಯ ಸದಸ್ಯರಾದ ವೆಂಕಟೇಶಪ್ಪನವರಿಗೆ ಸೂಕ್ತ ರಕ್ಷಣೆ ಯನ್ನು, ಸೂಕ್ತ ವ್ಯವಸ್ಥೆಯನ್ನು ಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಸದಸ್ಯರಾದ ವೆಂಕಟೇರಪ್ಪ ನವರು ತಮ್ಮ ಐಡೆಂಟಿಫಿಕೇಷನ್ ಕೊಟ್ಟಿದ್ದರೂ ಸಹ ಪೋಲೀಸ್ ಅಧಿಕಾರಿಗಳು ವಿಧಾನಸೌಧದಲ್ಲಿ ಮಾತನಾಡಿ ಕೆಟ್ಟ, ಕೆಟ್ಟ ಮಾತುಗಳನ್ನಾಡಿದ್ದಾರೆ. ಆದ್ದರಿಂದ ಯಾವ ಪೋಲೀಸ್ ಅಧಿಕಾರಿಗಳು ಈ ರೀತಿ ಮಾಡಿದ್ದಾರೆ ಅವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಬಿ.ಬಿ. ಪಾಟೀಲ್.—ಅಧ್ಯಕ್ಷರೆ, ನಮ್ಮ ಬಿಜಾಪುರ ಜಿಲ್ಲೆಯಲ್ಲಿ.....

ಅಧ್ಯಕ್ಷರು.—ಈ ವಿಷಯ ಮುಗಿಯ ಮೇಲೆ ತಮಗೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತೇನೆ. ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಮಾನ್ಯ ಸದಸ್ಯರಾದ ವೆಂಕಟೇಶಪ್ಪನವರನ್ನು ಹೊಡೆಯಲಿಕ್ಕೆ ಕಾರಣ ಏನು ಎಂದು ಹೇಳಬೇಕು. ಈ ರೀತಿ ಎಲ್ಲರನ್ನೂ ಹೊಡೆದರೆ ಮುಂದೆ ನಮ್ಮ ಗತಿ ಏನು ? ಜೀವನ ನಡೆಸುವುದು ಹೇಗೆ ? ಸಭೆಗೆ ಬರುವುದು ಹೇಗೆ ? ಇದನ್ನು ಆದಷ್ಟು ಬಂದೋಬಸ್ತು ಮಾಡಿ, ಈಗ ಮುಖ್ಯ ಮಂತ್ರಿಗಳು ಉತ್ತರ ಹೇಳಬೇಕು.

MR. SPEAKER.—I have received a letter from the Circle Inspector of Police, Rajajinagar Sub-Division, Bangalore, dated : 17-3-1981 which is as follows. I have also visited the hospital and saw the hon. member.

No. CC-4/81.

To

The Speaker,
Karnataka Legislative Assembly,
BANGALORE.

Dear Mr. Speaker,

I have the honour to inform you that I have found it my duty in the exercise of my powers under order No. 1337 of the Karnataka Police Mannal to bring the following facts to your kind notice.

On 16-3-1981 at about 9-45 P. M. I and the Police Sub Inspector Sri Lingachari and along with the staff of Rajajinagar P. S. went to 4th Block, Rajajinagar for investigation in a rioting case in Cr. No. 160/81 of Rajajinagar P. S. When we were making enquiries in the locality, a person who was later identified to be Sri C. Venkateshappa, M.L.A. of Bethamangala Constituency, K.G.F. interfered and abused the Police. Sri C. Venkateshappa further assaulted the Police Sub Inspector Sri Lingachari. I immediately intervened and brought Sri C. Venkateshappa to the P. S. where he continued to abuse the police. Thereafter, a case in Rajajinagar P. S. Cr. No. 161/81 u/s 353 IPC was registered against Sri Venkateshappa: The ACP was informed of this incident and he came to the Station immediately and held enquiries about the incident. Sri Venkateshappa made a complaint that he was assaulted by the police i.e., Sri Lingachari, PSI and the staff. Sri Venkateshappa was sent toVictoria Hospital for treatment where he was treated an as In-patient.

Sri Venkateshappa was detained in Rajajinagar P. S. at about 10-30 P. M. in connection with the above incident and

he was sent to Victoria Hospital at about 11-45 P. M. and later he was sent to Victoria Hospital where he was eventually admitted. This is for kind information."

SRI K BHASKAR NAIDU. -Sir, when you went to see Mr. Venkateshappa in Victoria Hospital, what was his condition ?

SRI A. LAKSHMISAGAR.—Sir, the police report does not mention about the assault on Sri Venkateshappa. The police complaint against Sri Venkateshappa is that, he interfered with the lawful action which was being taken by the police in connection with a raid case. Then, how Sri Venkateshappa sustained injuries? Who is responsible? The report from the police is silent on these points. In the context of the statements made by the hon. members it is said that he was assaulted by the police. Now what action the police propose to take against the persons may be police, may be others is also not indicated. What is the intended action that is being taken against him? Sir, the report hides more than it reveals. Therefore, my submission is, it is a fit case and whoever may be at fault, action should be taken immediately because there will be no safety for members of this Assembly. There are persons and persons and I am not saying one or the other. I am not safe because I am representing from the central place of the Bangalore City where all kinds of lawful and unlawful things happen. I will be going round all the time and I am called to go to some places where people want me to look into their grievances. This is a symptom of a very dangerous trend and all efforts should be made to see that such things do not occur again.

SRI R. GUNDU RAO (Chief Minister).—Sir, I would like to make the following statement.

Sir, on the night of 16-3-1981 at about 9-45 P. M., when the Circle Inspector of Police, Rajajinagar Sub-Division and Police Sub-Inspector Lingachari of Rajajinagar Police Station were busy in investigating a rioting case in the IV Block of Rajajinagar a person who was later on identified to be Sri C. Venkateshappa, M.L.A., from K. G. F. interfered and tried to assault the Sub Inspector, thus preventing him from discharging his duties. The Circle Inspector of Police and others brought Sri C. Venkateshappa to the Police Station as his identity was not disclosed at that stage. Further this person continued to abuse the Police and misbehaved even in the Police Station. In the meanwhile the Assistant Commissioner of Police, Malleswaram Division on being informed of the incident arrived at the Police Station and conducted enquiries. Shri C. Venkateshappa complained that he was assaulted by the Sub Inspector

and his staff while the latter complained that the former misbehaved again in the Police Station. A case has been taken up in this connection against the M.L.A. under Section 353 I.P.C. Sub Inspector Lingachari and the 3 Police Constables have been kept under suspension with immediate effect and a Departmental Enquiry is initiated. The enquiries are under progress.

Shri Venkateshappa has been admitted into Victoria Hospital where he is under treatment for the injuries alleged to have been received by him due to the assault by the Police. Shri Venkateshappa has alleged that he was assaulted at the spot and that though he disclosed his identity, the Police still took him to the police Station where according to him he was beaten up. The matter is thoroughly being enquired into.

ಶ್ರೀ ಎಂ.ಎಸ್ ಶೀರನಾಳಿ ಚಂದ್ರುಶೇಖರ್.—ಅಧ್ಯಕ್ಷರೆ, ಬೆಳಗ್ಗೆ ನೋಡಿದಾಗ ಸಂಪೂರ್ಣ ಚಾರ್ಜಸ್ ಸಬ್ ಇನ್ಸ್‌ಪೆಕ್ಟರ್ ಮೇಲೆ ಹಾಕಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರಾದ ವೆಂಕಟೇಶಪ್ಪನವರು ತಮಗೆ ಏನಾದರೂ ಕಂಪ್ಲೆಂಟ್ ಲಾಡ್ಜ್ ಮಾಡಿದ್ದಾರೆಯೇ?

ಶ್ರೀ ಆರ್. ಗುರಿಡೂರಾವ್.—ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಎ. ಸಿ. ಪಿ, ಅವರು ಆಲ್ಲಿಗೆ ಹೋದಾಗ ಇಂತಿಂಥಹವರು ಹೊಡೆದಿದ್ದಾರೆಂದು ಹೇಳಿದ್ದಾರೆ. ಶಾಸಕರ ಮೇಲೆ ಮಾಡಿರುವ ದಿಸೆಯಿಂದ ಅದನ್ನು ಇಮೊಡಿಯಟ್ ಆಗಿ ತೆಗೆದುಕೊಂಡು ಅವರು ಯಾರು ಯಾರನ್ನು ಹೇಳಿದ್ದಾರೆ ಅವರನ್ನು ಸಸ್ಪೆಂಡ್ ಮಾಡಿ ಎನ್‌ಕ್ವಯರಿ ಮಾಡಲಿಕ್ಕೆ ಹೇಳಿದ್ದೇವೆ.

SRI A. LAKSHMI SAGAR.—That is not the case where a departmental enquiry will meet with the ends of justice. If there is a complaint of assault by the MLA, strainghtway the case must be taken up for investigation and see that the accused persons are charge sheeted. Departmental enquiry will not bring out the truth Sir, the departmental enquiry will not bring out anything. This has been our experience. Therefore, may I know from the Hon'ble Chief Minister whether he changes his mind and order an investigation into this case and eventually charge sheet is filed against the accused persons?

SRI R. GUNDU RAO.—Lee this enquiry be over.

ಶ್ರೀ ಪಿ. ಎನ್. ರೆಡ್ಡಿ.—ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಡುವಾಗ ಒಬ್ಬ ಸಬ್ ಇನ್‌ಸ್ಪೆಕ್ಟರ್ ಮತ್ತು ಸಿ ಜನ ಪೋಲೀಸ್ ಕಾನ್‌ಸ್ಟೇಬಲ್‌ಗಳ ಮೇಲೆ ಕ್ರಮ ತೆಗೆದುಕೊಂಡಿದೆ ಎಂದು ಹೇಳಿದ್ದಾರೆ. ಇಲ್ಲಿ ಮುಖ್ಯ ಮಂತ್ರಿಯವರು ಮಾಡಿದ ವರದಿಗೂ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್‌ರವರ ವರದಿಗೂ ಒಂದಕ್ಕೊಂದಕ್ಕೆ ವ್ಯತ್ಯಾಸವಿರುವುದರಿಂದ ಆ ಸರ್ಕಲ್ ಇನ್ಸ್‌ಪೆಕ್ಟರ್‌ರವರ ಮೇಲೂ ಕ್ರಮವನ್ನು ತೆಗೆದುಕೊಳ್ಳುವುದು ಸೂಕ್ತವೆಂದು ಕಾಣುತ್ತದೆ.

ಶ್ರೀ ಬಿ. ಬಿ. ಪಾಟೀಲ್.—ಸ್ವಾಮಿ, ಅಧ್ಯಕ್ಷರೆ, ನಮ್ಮ ಬಿಜಾಪುರ ತಾಲೂಕಿನಲ್ಲಿ ಮಳೆ ಬಾರದೇ ಇರುವ ಕಾರಣ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆಯೆಂದು ಈಗ ೪–೫ ದಿವಸಗಳ ಹಿಂದೆಯೇ ನಾನು ತಮಗೆ ಗಮನಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಇದೇರೀತಿ ಕುಡಿಯುವ ನೀರಿಗೆ ಅಭಾವವಿರುವುದಾಗಿ ಇನ್ನೂ ಅನೇಕ ಸದಸ್ಯರುಗಳು ಗಮನ ಸೆಳೆಯುವ ಸೂಚನೆಗಳನ್ನು ಕಳುಹಿಸಿರುವುದರಿಂದ ಈ ವಿಚಾರವನ್ನೇ ಚರ್ಚೆಮಾಡಲು ಒಂದು ದಿನ ಗೊತ್ತುಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಗಲಿ, ಇದರ ಬಗ್ಗೆ ಚರ್ಚೆಮಾಡಲು ಒಂದು ದಿನವನ್ನು ಗೊತ್ತು ಮಾಡೋಣ.

ಒಬ್ಬ ಸದಸ್ಯರು.—ಸ್ವಾಮಿ, ನಾನು ಅನೇಕ ಪ್ರಶ್ನೆಗಳನ್ನು ತಮಗೆ ಕಳುಹಿಸಿದ್ದೇನೆ. ಆದರೆ ಇದುವರೆಗೂ ಒಂದೂ ಕೂಡ ಸಭೆಯಲ್ಲಿ ಬಂದಿಲ್ಲ.

(ಉತ್ತರ ಇಲ್ಲ)

ANNOUNCEMENT

MR. SPEAKER.—I have received the following message from the Chairman, Legislative Council.

> As required by rule 106 of the Rules of Procedure and Conduct of Business in the Karnataka Legislative Council, I send here with the following three Bills which have been agreed to by the Logislative Council on 16th March, 1981 without amendments.

NAME OF THE BILLS

1. The Bangalore Development Authority (Amendment) Bill 1981.
2. The Karnataka Local Authorities Official Language (Amendment) Bill, 1981.
3. The Karnataka Debt Relief (Amendment) Bill, 1981.

SRI B. B. SAYANAK.—Mr. Speaker, Sir, the tobacco growers are asking for a reasonable price to their produce.

MR. SPEAKER.—I have seen your calling attention notice.

SRI B. B. SAYANAK.—The workers are on Rasta-Roko sinc 14th thereby caus ng inconvenience to the pub'ic. Therefore, I request the Hon'ble Chief Minister to make a statement which he promised yesterday

MR. SPEAKER.—I will fix up a date,

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೆ, ನಾನು ತಮಗೆ ಒಂದು ಅಡ್ಜರ್ನ್‌ಮೆಂಟ್ ಮೋಷನ್ನನ್ನು ಕಳುಹಿಸಿಕೊಟ್ಟಿದ್ದೇನೆ, ದಯವಿಟ್ಟು ಅದನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ತಾವು ಕಳುಹಿಸಿಕೊಟ್ಟಿರುವ ವಿಷಯವನ್ನು ನೋಡಿದ್ದೇನೆ. ಆದರೆ ಅದು ಅಡ್ಜರ್ನ್‌ಮೆಂಟ್ ಮೋಷನ್ ಆಗುವುದಿಲ್ಲ. ಇದು ತಮಗೂ ಕೂಡ ಗೊತ್ತಾಗುತ್ತದೆ. ಆದ್ದರಿಂದ ತಾವು ಇದನ್ನು ಬೇರೆ ಯಾವ ರೀತಿಯಲ್ಲಿ ಪ್ರಸ್ತಾಪ ಮಾಡಬಹುದೆಂಬುದನ್ನು ಆಲೋಚನೆ ಮಾಡಿ ನೋಡಿ.

ಶ್ರೀ ಹೆಚ್. ಗಂಗಾಧರನ್.—ಸ್ವಾಮಿ, ನಮ್ಮ ಕರ್ನಾಟಕಕ್ಕೆ ಆಗೌರವವನ್ನು ತರತಕ್ಕ ವಿಚಾರದ ಬಗ್ಗೆ ನಾನು.....

ಅಧ್ಯಕ್ಷರು.—ನೀವು ಕಳುಹಿಸಿಕೊಟ್ಟಿರುವ ವಿಷಯದ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆ ವಿಷಯ ಏನಾದರೂ ಇರಲಿ, ಆದರೆ, ತಾವು ಕಳುಹಿಸಿಕೊಟ್ಟಿರುವುದು